ರಾಜ್ಯದಲ್ಲಿನ ಹೊಸದಾಗಿ ಸ್ಥಾಪಿಸಲಾದ ಐ.ಟಿ.ಐ. ಕೇಂದ್ರಗಳು

727-ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕೇಂದ್ರಗಳನ್ನು ಪ್ರಾರಂಬಿಸಲಾಗಿದೆ.

ಆ) ಕೊಪ್ಪಳ ತಾಲ್ಲೂಕಿನಿಂದ ಕುಕ್ಕನೂರಿಗೆ ಐ.ಟಿ.ಐ. ಟ್ರೇಡ್ಸ್ ಶಿಫ್ಟ್ ಮಾಡಲಾಗಿದೆಯೇ?

ಇ) ಅದೇ ಮಾದರಿಯಲ್ಲಿ ಶಿಗ್ಗಾಂವ್ ಪಟ್ಟಣಕ್ಕೆ ಹೊಸದಾಗಿ ಹುಬ್ಬಳ್ಳಿಯಿಂದ ಐ.ಟಿ.ಐ. ಟ್ರೇಡ್ ಶಿಫ್ಟ್ ಮಾಡಲಾಗುವುದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):

ಅ) 1992-93ರಲ್ಲಿ ಐದು (5)

ಆ) ಇಲ್ಲ

ಇ) ಇಲ್ಲ

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಉಪಾಧ್ಯಕ್ಷಣಿಯವರೆ, ಉತ್ತರದಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆಗೆಯಲಾಗಿದೆ ಎಂದು ಕೇಳಿದ್ದಕ್ಕೆ '5' ಎಂದು ಉತ್ತರ ಕೊಟ್ಟಿದ್ದಾರೆ. ಕೊಪ್ಪಳ ತಾಲ್ಲೂಕಿನಿಂದ ಕುಕ್ಕುನೂರಿಗೆ ಐ.ಟಿ.ಐ. ಟ್ರೇಡ್ಸ್ ಶಿಫ್ಟ್ ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಕೊಪ್ಪಳ ತಾಲ್ಲೂಕಿನ ಕುಕ್ಕೂನೂರಿನಲ್ಲಿ ಹುಬ್ಬಳ್ಳಿಯಿಂದ ಶಿಫ್ಟ್ ಮಾಡಿರುವುದೇ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಕೊಪ್ಪಳ ತಾಲ್ಲೂಕಿನಿಂದ ಕುಕ್ಕೂನೂರಿಗೆ ಆಗಿದೆ. ಕಾರಣ ಅಲ್ಲಿಗೆ ಟ್ರೇಡ್ಸ್ ಈಗಾಗಲೇ ಶಿಫ್ಟ್ ಮಾಡಲಾಗಿದ . ನಮ್ಮ ಮಾನ್ಯ ಮಿತ್ರರಾದಂತಹ ಶಿವನಂದ ಕೌಜಲಗಿಯವರು ಪ್ರಶ್ನೆಯನ್ನು ಕೇಳಿದ ಪ್ರಕಾರ ನಮ್ಮ ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಪಾಸಾದವರು 9,16,493 ಜನ ನಿರುದ್ಯೋಗಿಗಳು ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಮುಖ್ಯವಾಗಿ ಜಾಬ್ ಓರಿಯಟೆಂಟ್ ಕೋರ್ಸ್‌ಗಳಾದಂತಹ ಐ.ಟಿ.ಐ. ಗಳನ್ನು ತೆಗೆಯುವುದು ಬಹಳ ಅವಶ್ಯಕತೆ ಇದೆ. ನನ್ನ ಮತಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಬರುತ್ತಿದ್ದು ಅಲ್ಲಿ ಪ್ರೈವೇಟ್ ಐ.ಟಿ.ಐ. ನೂ ಇಲ್ಲ, ಸರ್ಕಾರಿ ಐ.ಟಿ.ಐ. ನೂ ಇಲ್ಲ. ಅದಕ್ಕಾಗಿ ಹೆಚ್ಚು ಆದ್ಯತೆ ಕೊಟ್ಟು ಐ.ಟಿ.ಐ. ಕೇಂದ್ರಗಳನ್ನು ತೆರೆಯಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಸದಸ್ಯರು ಅವವ ಪ್ರಶ್ನೆಯನ್ನು ತಿದ್ದುಪಡಿ ಮಾಡಿದ್ದಾರೆ. ಅವರು ಕೇಳಿದ ಪ್ರಕಾರ ಕೊಪ್ಪಳ ತಾಲ್ಲೂಕಿನಿಂದ ಕುಕ್ಕುನೂರಿಗೆ ಯಾವುದು ಶಿಫ್ಟ್ ಆಗಿಲ್ಲ. ಐ.ಟಿ.ಐ. ತೆರೆಯುವ ಬಗ್ಗೆ ವಿಚಾರ ಮಾಡುವಾಗ ಇದನ್ನು ಗಮನದಲ್ಲಟ್ಟು ಮಾಡಬೇಕೆಂದು ಆಲೋಚನೆ ಮಾಡಿ ಮಾಡುತ್ತೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಕೊಪ್ಪಳ ತಾಲ್ಲೂಕಿನ ಕುಕ್ಕುನೂರಿಗೆ ಐ.ಟಿ.ಐ. ಟ್ರೇಡ್ಸ್ ಶಿಫ್ಟ್ ಮಾಡಿಲ್ಲ ಅಂತ ಹೇಳುತ್ತಿದ್ದಾರೆ. ಕುಕ್ಕನೂರು

ರಾಯಚೂರು ಜಿಲ್ಲೆಗೆ ಬರುತ್ತದೆ. ಹುಬ್ಬಳ್ಳಿ ಧಾರವಾಡ ಜಿಲ್ಲೆಗೆ ಬರುತ್ತದೆ. ಧಾರವಾಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಗೆ ಅವರು ಟ್ರೇಡ್‌ಗಳನ್ನು ಶಿಫ್ಟ್ ಮಾಡಿದಾಗ ಕೇವಲ 40 ಕಿ.ಮೀ. ಇರತಕ್ಕ ಧಾರವಾಡ ಜಿಲ್ಲೆಯಲ್ಲಿರತಕ್ಕ ಶಿಗ್ಗಾವ್ ಪ್ರದೇಶ ಹುಬ್ಬಳ್ಳಿಗೆ ಬಹಳ ಹತ್ತಿರವಾಗುತ್ತದೆ. ಅದಕ್ಕೆ ಅದ ಮಾದರಿಯೊಳಗೆ ಕೇವಲ ಒಂದೆರಡು ಟ್ರೇಡ್‌ಗಳನ್ನಾದರೂ ಶಿಫ್ಟ್ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಬೇರೆ ಐ.ಟಿ.ಐ.ಗಳನ್ನು ನಾವು ಟ್ರೇಡ್‌ಗಳನ್ನು ಶಿಫ್ಟ್ ಮಾಡಿಬಿಟ್ಟರೆ ತೊಂದರೆಯಾಗುತ್ತದೆ. ನಾವುಎಲ್ಲಿಂದ ಶಿಫ್ಟ್ ಮಾಡುತ್ತೇವೆ ಅಲ್ಲಿ ಕ್ಲೋಸ್ ಮಾಡಬೇಕಾಗುತ್ತದೆ. ಟ್ರೇಡ್‌ಗಳನ್ನು ಶಿಫ್ಟ್ ಮಾಡುವಾಗ ಬಹಳ ಆಲೋಚನೆಯಿಂದ ಮಾಡಬೇಕಾಗುತ್ತದೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಹುಬ್ಬಳ್ಳಿಯಲ್ಲಿ ಐ.ಟಿ.ಐ. ಕಾಲೇಜು ಇದೆ. ಅಲ್ಲಿ ಅನೇಕ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಆ ಕಾರಣದಿಂದಲೇ ಕಳೆದ ಎರಡು ವರ್ಷಗಳ ಹಿಂದೆ ಕುಕನೂರಿಗೆ ಶಿಫ್ಟ್ ಮಾಡಿಬಿಟ್ಟಿದ್ದೀರಿ, ಈಗಲೂ ಅಲ್ಲಿದ್ದ ಅಧಿಕಾರಿಗಳನ್ನು ಪ್ರಿನ್ಸಿಪಾಲನ್ನು ನಾನು ಭೇಟಿಯಾದಾಗ ಶಿಗ್ಗಾವಿಗೆ ಮಾಡೋಕೆ ಏನೂ ತೊಂದರೆ ಇಲ್ಲ, ಸರ್ಕಾರ ಆದೇಶ ಮಾಡಿದರೆಮಾಡಿಕೊಡುತ್ತೇವೆ ಎಂದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎರಡು ಟ್ರೇಡ್‌ಗಳನ್ನು ಶಿಫ್ಟ್ ಮಾಡಿದರೆ ಯಾವುದೇ ತೊಂದರೆ ಸರ್ಕಾರಕ್ಕಾಗುವುದಿಲ್ಲ, ಇದರಿಂದ ಹಣಕಾಸಿನ ತೊಂದರೆಯೂ ಆಗುವುದಿಲ್ಲ. ಆ ಕಾರಣದಿಂದ ಇದಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಹುಬ್ಬಳ್ಳಿಯಿಂದ ಶಿಗ್ಗಾವಿಗೆ ಒಂದರೆಡು ಟ್ರೇಡ್‌ಗಳನ್ನು ಶಿಫ್ಟ್ ಮಾಡಿ ಕೊಡಬೇಕೆಂದು ವಿನಂತಿ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಸದಸ್ಯರು ಹುಬ್ಬಳ್ಳಿಯಲ್ಲಿ ಸ್ಥಳ ಇಲ್ಲಾಂತ ಹೇಳಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟು ಸರಿಯಾಗಿ ಸ್ಥಳ ಒದಗಿಸುತ್ತೇವೆ. ಹೊಸ ಐ.ಟಿ.ಐ. ಆಲೋಚನೆ ಮಾಡುವಾಗ ಇದನ್ನೂ ಗಮನದಲ್ಲಿಡುತ್ತೇವೆ.

ಆಶ್ರಯ ಯೋಜನೆಯಡಿ ದೊಡ್ಡಬಳ್ಳಾಪುರಕ್ಕೆ ಮಂಜೂರಾದ ಮನೆಗಳು

1063-ಶ್ರೀ ಆರ್.ಎಲ್.ಜಾಲಪ್ಪ (ದೊಡ್ಡಬಳ್ಳಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿ ದೊಡ್ಡಬಳ್ಳಾಪುರ ಕ್ಷೇತ್ರಕ್ಕೆ ಮಂಜೂರು ಮಾಡಿರುವ ಮನೆಗಳು ಎಷ್ಟು?

ಆ) ಎಷ್ಟು ಮನೆಗಳು ನಿರ್ಮಾಣ ಹಂತದಲ್ಲಿವ ?

ಇ) ಎಷ್ಟು ಮನೆಗಳು ಪೂರ್ಣಗೊಂಡಿವೆ?

ಶ್ರೀ ಗೋಪಿನಾಥ ಆರ್. ಸಾಂದ್ರ (ವಸತಿ ಸಚಿವರು):

ಅ) 1,000 ಮನೆಗಳು.

ಆ) 35 ಮನೆಗಳು.

ಇ) ಇಲ್ಲ.